
# ನಾಲ್ಕು ಕವಿತೆಗಳು




## ಲಲಿತಾ ಸಿದ್ಧಬಸವಯ್ಯ

ಕಲೆ: ಬಸವರಾಜ ಎಸ್. ಕಲೆಗಾರ


### ಸಂತೋಷ ಅಹಾ ಸಂಗೀತ ಅಹಾ



ಖಾಲಿಯಾದೆ
ಎಂದು ಖಚಿತವಾದ ಕೂಡಲೆ
ಸಂತೋಷಗೊಂಡು ಚಂದಿರನ ಕರೆದೆ
ಹೇಳಿದೆ; ಈಗ ನನಗೆ ನಿನ್ನನ್ನು
ನಿನ್ನದಲ್ಲದ ಬೆಳುದಿಂಗಳನ್ನು
ಹಾಡಿ ಹೊಗಳುವ ಜರೂರತ್ತಿಲ್ಲ
ನಾನಿನ್ನು ಕವಿಯಲ್ಲ

ನನಗೆ ನೂರಕ್ಕಿನ್ನೂರು ಸ್ವಾತಂತ್ರ್ಯ
ಏನು ಬರೆದಿರೇನು ಬರೆದಿರೆಂಬ
ಗಬ್ಬು ಪ್ರಶ್ನೆಗೆ ಉತ್ತರಿಸಲೆ ಬೇಕಾಗಿಲ್ಲ
ಅಲ್ಲಿ ಯುದ್ಧವಾಯ್ತು
ಅಲ್ಲಲ್ಲಿ ಅತ್ಯಾಚಾರವಾಯ್ತು
ಅಲ್ಲಿ ಕವಿಯನ್ನು ಸೆರೆ ಮಾಡಲಾಯ್ತು
ಸುಮ್ಮನೆ ಕುಂತಿದ್ದೀರಿ?
ಇಂಥಾ ಕಮಂಗಿ
ವಿಚಾರಣೆಗೊಳಪಡುವಂತಿಲ್ಲ
ಇನ್ನು ನಾನು ಹೆಂಗಸು ಅಷ್ಟೇ
ಮಹಿಳಾ ಕವಯಿತ್ರಿಯಲ್ಲ!

ಬೆಳಗ್ಗೆಯೆದ್ದು
ಹಾಲಿನ ಕೊಟ್ಟೆ ಕತ್ತರಿಸಿ
ನೆಲವೊರೆಸಿ ಸಿಂಕು ತೊಳೆದು
ಬೇಳೆ ಬೇಯಿಸುವುದನೆಲ್ಲ
ಮಾಡಬಹುದು ನಿರಂಬಳ
ಅಲ್ಲೆಲ್ಲ ರೂಪಕಗಳಿಗೆ ತಿಣುಕಿ
ಅವು ಕಚ್ಚದೆ ಉದುರಿದರೆ ಸಿಡುಕಿ
ಥೂ ಥೋ ಥೂತೊಥೋ...
ಶಿವಶಿವಾ
ಈ ರಸ್ತೆ ಕೆಲಸ ತಪ್ಪಿಸಿದೆ

ಸಂತೋಷ ಅಹಾ ಅಹಾ ಸಂಗೀತಾ
ನಿನ್ನೊಟ್ಟೆ ತಣ್ಣಗಿರಲಿ
ಮದುವೆಯೇ ಆಗದ
ಇನ್ನೂ ಇಬ್ಬರು ಗಂಡಸು
ಮಕ್ಕಳಾಗಲಿ

